ಗೋವಿಂದ ಭಟ್ಟರು 'ಈ ಮಾತನ್ನು ನಾನು ಯಾವತ್ತೋ ನಿನಗೆ ಹೇಳಬೇಕೆಂದು ಇದ್ದೆ ಶಂಕರಿ. ನಿನ್ನ ತವರುಮನೆಯವರು ಮಡಿ ಮಡಿ ಅಂತ ಈಗಲೂ ಜೀವ ಬಿಡುತ್ತಾರೆ ಎಂದು ಈ ತನಕ ಹೇಳಿಲ್ಲ' ಎಂದವರೇ 'ನಮ್ಮೂರಿನ ಬ್ರಾಹ್ಮಣರೂ ವಿಶೇಷ ಸಮಾರಂಭಗಳಿಗೆ ಬಿಡು, ಆಕಸ್ಮಿಕವಾಗಿ ನಮ್ಮಲ್ಲಿಗೆ ಬಂದಾಗ, ಸೌಮ್ಯ ಮನೆಯೊಳಗೆ ಓಡಾಡುವುದು ನೋಡಿದರೆ, 'ಆ ಗೋವಿಂದ ಎಲ್ಲವನ್ನೂ ಬಿಟ್ಟು ಬಿಟ್ಟಿದ್ದಾನೆ' ಎಂದು ಠಂ ಠಂ ಮಾಡದೆ ಇರಲಿಕ್ಕಿಲ್ಲ' ಎಂದು ಸುಮ್ಮನಿದ್ದೆ ಎಂದರು. ಆಮೇಲೆ 'ನಾವೆಲ್ಲ ಅದಕ್ಕೆ ಹೆದರುವುದು ಬೇಡ ಶಂಕರಿ. ನೀನು ಸೌಮ್ಯಳಲ್ಲೇ ಅಡಿಗೆ ಮನೆ ಕೆಲಸ ಮಾಡಿಸುವುದಾದರೆ ಮಾಡಿಸು' ಎಂದರು.

ಮರುದಿನ ಬೆಳಗ್ಗೆ ಸೌಮ್ಯ ಭಟ್ಟರ ಮನೆಗೆ ಹೋದಾಗ ಪ್ರತಿನಿತ್ಯ ಹೊರಗಿನ ಜಗಲಿಯಲ್ಲಿ ಸೌಮ್ಯಳಿಗೆ ತಿಂಡಿ ತೀರ್ಥ ನೀಡುತ್ತಿದ್ದ ಶಂಕರಿ ಅಮ್ಮ – 'ನೀನು ಇಂದಿನಿಂದ ಇಲ್ಲಿ ಹೊರಗೆ ತಿಂಡಿ ತೀರ್ಥ ಸ್ವೀಕರಿಸಬಾರದು ಸೌಮ್ಯ. ನಮ್ಮ ಹಾಗೇ ಅಟ್ಟುಂಬಳದ ಒಳಗೆ ಬಂದು ಸ್ವೀಕರಿಸಬೇಕು' ಎಂದರು.

ಸೌಮ್ಯ 'ಅದೆಲ್ಲ ಬೇಡ ಅಕ್ಕ. ನಾನು ಹೊರ ಜಗಲಿಯಲ್ಲೇ ಇರುತ್ತೇನೆ, ನನಗೇನೂ ಬೇಸರ ಇಲ್ಲ' ಎಂದಳು.

ಶಂಕರಿ ಅಮ್ಮ 'ಛೆ! ಛೆ! ನಮ್ಮ ಯಜಮಾನರಿಗೆ ಅದು ಇಷ್ಟ ಇಲ್ಲ. ಅಲ್ಲದೆ ನೀನು ಅಡಿಗೆ ಮನೆಗೆ ಬಂದರೆ ನನಗಂತೂ ತುಂಬಾ ಉಪಕಾರವಾಗುತ್ತದೆ. ನೀನು ಊಟಕ್ಕೆ ಕುಳಿತುಕೊಳ್ಳುವಾಗ ಮುಜುಗರವಾಗುತ್ತದೆಂದಾದರೆ, ಅಟ್ಟುಂಬಳದಲ್ಲೇ ಅಡ್ಡ ಪಂಕ್ತಿಯಲ್ಲಿ ಕೂರು ಅಥವಾ ನಮ್ಮ ಊಟದ ನಂತರ ಒಬ್ಬಳೇ ಅಟ್ಟುಂಬಳದಲ್ಲಿ ಕುಳಿತು ಉಣ್ಣು' ಎಂದರು.

ಸೌಮ್ಯ ಮುಜುಗರಪಟ್ಟುಕೊಂಡು 'ನಾನು ಹೀಗೆ ಮಾಡಿದರೆ ಊರಿನ ಮಂದಿ ನೋಡಿ ಏನೆಂದಾರು ಅಕ್ಕ? ನಿಮ್ಮಲ್ಲಿಗೆ ಬರುವ ಕೂಲಿಯಾಳುಗಳೂ ಇದನ್ನು ನೋಡಿ ಗೋವಿಂದ ಭಟ್ಟರಲ್ಲಿ ಮಡಿಮೈಲಿಗೆ ಇಲ್ಲ ಅಂದರೆ ನಿಮಗೆ ಅವಮಾನವಲ್ಲವೇ?' ಎಂದು ವಿನಂತಿಸಿದಳು.

ಶಂಕರಿ ಅಮ್ಮ ದೃಢನಿರ್ಧಾರದಲ್ಲಿ 'ನಮಗೆ ಊರಿನವರನ್ನು ಕಟ್ಟಿಕೊಂಡು ಏನಾಗಬೇಕು ಸೌಮ್ಯ? ನೀನು ನಮ್ಮ ಮನೆಯ ಒಳಗೆ ಬಾ, ನಾನು ನಿನಗೆ ಇನ್ನು ಅಟ್ಟುಂಬಳದಲ್ಲೇ ಊಟ ಹಾಕೋದು' ಎಂದರು.

ಆ ದಿನಗಳಲ್ಲಿ ಗೋವಿಂದ ಭಟ್ಟರಿಂದ ತನ್ನ ಮಾಂತ್ರಿಕ ಶಕ್ತಿಗೆ ಸೋಲಾಗಿ ಮುಖ ಭಂಗವಾದ ಕುಪ್ಪಣ್ಣಭಟ್ಟ, ಗೋವಿಂದ ಭಟ್ಟರು ಸಿಕ್ಕಾಗಲೆಲ್ಲ 'ಹೇಗಿದ್ದೀರಿ ಗೋವಿಂದಣ್ಣ?' ಎಂದು ಪ್ರಶ್ನಿಸುವುದನ್ನು ಬಿಡಲಿಲ್ಲ. ಅಂಥ ಹೊತ್ತಿನಲ್ಲಿ ಗೋವಿಂದ ಭಟ್ಟರೂ 'ಏನು ಕುಪ್ಪಣ್ಣ?' ಎಂದು ವಿಚಾರಿಸಿ, 'ಚೆನ್ನಾಗಿದ್ದೇನೆ' ಎನ್ನುತ್ತಿದ್ದರು. ಆದರೂ ತನ್ನ ಮನೆಯಲ್ಲಿ ಆಗುವ ಪೂಜೆ ಪುನಸ್ಕಾರಗಳಿಗೆ ಊರ ಬ್ರಾಹ್ಮಣ ಮಂದಿಯನ್ನು ಆಹ್ವಾನಿಸುವ ಹಾಗೆ ಕುಪ್ಪಣ್ಣ ಭಟ್ಟನನ್ನು ಗೋವಿಂದ ಭಟ್ಟರೂ ಆಹ್ವಾನಿಸುತ್ತಿದ್ದರು. ಆದರೆ ಕುಪ್ಪಣ್ಣ ಭಟ್ಟನಿಗೆ ಗೋವಿಂದ ಭಟ್ಟರಿಂದ ತನಗೆ ಮುಖಭಂಗವಾಗಿದೆ ಎಂಬ ವಿಷಯ ಇಂದ್ರಾಣಿ ಬಿಟ್ಟರೆ ಜಯದೇವಪ್ಪನಿಗೆ ಮಾತ್ರ ಗೊತ್ತಾಗಿತ್ತೇ ವಿನಾ ಊರಮಂದಿಯ ಗಮನಕ್ಕೆ ಬಂದಿರಲಿಲ್ಲ ಎಂಬ ಧೈರ್ಯವಿತ್ತು. ಗೋವಿಂದ ಭಟ್ಟರಂತೂ ಅದನ್ನು ಆಗಲೇ ಮರೆತ ಹಾಗೇ ಇದ್ದುದರಿಂದ ಕುಪ್ಪಣ್ಣ ಭಟ್ಟ ತನ್ನ ಮಾಂತ್ರಿಕ ಶಕ್ತಿಯನ್ನು ಜನರೆದುರು ಪ್ರದರ್ಶಿಸುತ್ತಲೇ ಇದ್ದ.

ಗೋವಿಂದ ಭಟ್ಟರಲ್ಲಿ ಸೌಮ್ಯ ಮನೆಕೆಲಸಕ್ಕೆ ಇರುವುದು ಯಾವುದೋ ಮೂಲದಿಂದ ಕುಪ್ಪಣ್ಣ ಭಟ್ಟನ ಕಿವಿಗೆ ಬಿದ್ದಾಗ ಅವನು 'ಎಲಾ, ಈ ಬ್ರಾಹ್ಮಣನಿಗೆ ಆ ಮಾಲೇರ ಹೆಣ್ಣಿನ ಮೇಲೆ ಯಾಕೆ ಕಣ್ಣು ಬಿತ್ತು?' ಎಂದು ಯೋಚಿಸತೊಡಗಿದ. ಸುಮ್ಮನೆ ಎನ್ನುವಂತೆ ಅವನು ಗೋವಿಂದ ಭಟ್ಟರ ಮನೆಗೆ ಬಂದ. ಅವನಿಗೆ ಭಟ್ಟರ ಮನೆಯೊಳಗೆ ಸೌಮ್ಯ ಓಡಾಡುವುದು ಕಾಣಿಸಿತು. ಅವನು ಸೌಮ್ಯಳಲ್ಲೇ 'ಗೋವಿಂದಣ್ಣ ಇಲ್ಲವೇ?' ಎಂದು ಲೋಕಾಭಿರಾಮವಾಗಿ ಪ್ರಶ್ನಿಸಿದ. ಜೊತೆಗೆ ಆ ಮನೆಯೊಳಗೆ ಸೌಮ್ಯಳಿಗೆ ಎಲ್ಲಿಯತನಕ ಪ್ರವೇಶ ಇದೆ ಎಂಬುದನ್ನು ಸೂಕ್ಷ್ಮವಾಗಿ ಗಮನಿಸಿದ. ಆಮೇಲೆ ಶಂಕರಿ ಅಮ್ಮನಲ್ಲಿ ಒಂದಿಷ್ಟು ಹೊತ್ತು ಹರಟೆ ಹೊಡೆದು ಹೊರಡುವಾಗ 'ಈ ಗೋವಿಂದಣ್ಣ ಖಂಡಿತ ಸೌಮ್ಯಳನ್ನು ಇರಿಸಿಕೊಂಡಿರಬೇಕು' ಎಂದು ತನ್ನ ಮನಸ್ಸಿನೊಳಗೆ ಲೆಕ್ಕ ಹಾಕಿದ. ಅಲ್ಲಿಂದ ಹೊರಟ ಅವನು ತನ್ನ ಮನೆಗೆ ನಡೆಯುತ್ತಾ ಹೋಗುವಾಗ ಗೋವಿಂದ ಭಟ್ಟರ ಹೆಂಡತಿ ಶಂಕರಿ ಅಮ್ಮನಿಗಿಂತ ಸೌಮ್ಯ ಹೆಚ್ಚು ಸುಂದರಿ, ಅಷ್ಟೇ ಏಕೆ ತನ್ನ ಹೆಂಡತಿಗಿಂತಲೂ ಆಕೆ ಸುಂದರಿ ಎಂದು ತರ್ಕಿಸಿದ. 'ಗೋವಿಂದ ಭಟ್ಟರ ಜೊತೆ ಆಕೆಗೆ ಮಲಗುವುದು ಇಷ್ಟವಾದರೆ ನಾನೇಕೆ ಆಕೆಗೆ ಆಗುವುದಿಲ್ಲ?' ಎಂದೂ ಲೆಕ್ಕ ಹಾಕಿ ಅವನು ಮನೆ ತಲುಪುವಷ್ಟರಲ್ಲಿ ಏನೇ ಆದರೂ ಸೌಮ್ಯಳನ್ನು ವಶಪಡಿಸಿಕೊಳ್ಳಲೇಬೇಕು ಎಂದು ನಿರ್ಧರಿಸಿದ.

ಇದರಿಂದಾಗಿ ಕುಪ್ಪಣ್ಣ ಭಟ್ಟನಿಗೆ ತಮ್ಮ ಮನೆಯಿಂದ ಶಿರ್ವಪೇಟೆಗೆ ಹೋಗಲು ನೇರವಾದ ದಾರಿ ಇದ್ದರೂ (ಆ ದಿನಗಳಲ್ಲಿ ರಸ್ತೆಗಳೇ ಇರಲಿಲ್ಲ. ಕಾಲು ದಾರಿಗಳು ಮಾತ್ರ ಇದ್ದುವು) ಆತ ಆ ದಾರಿ ಬಿಟ್ಟು ಸೌಮ್ಯಳ ಮನೆ ಮುಂದೆ ಹೋಗುವ ಕಾಲು ದಾರಿಯನ್ನೇ ಬಳಸಲು ಆರಂಭಿಸಿದ. ಸಂಜೆ ಹೊತ್ತು ಪೇಟೆಯಿಂದ ಬರುವಾಗ ಬೇಕೆಂದೇ ಸೌಮ್ಯಳ ಮನೆಗೆ ಬಂದು ಬೆಲ್ಲ ನೀರು ಕೇಳಿ, 'ಸೌಮ್ಯ ಎಲ್ಲಿ?' ಎಂದು ಅವಳ ಅಮ್ಮನನ್ನು ಕೇಳತೊಡಗಿದ. ಒಂದು ಬಾರಿ ಸೌಮ್ಯ ಮನೆಯಲ್ಲಿದ್ದಾಗ 'ನೀನು ಕಷ್ಟದಲ್ಲಿ ಇರುವುದು ಗೊತ್ತು ಸೌಮ್ಯ. ಆ ಗೋವಿಂದಭಟ್ಟರಲ್ಲಿ ನೀನು ಕೆಲಸಕ್ಕೆ ಸೇರಿದ್ದು ಒಳ್ಳೆದಾಯಿತು' ಎಂಬ ಮೆಚ್ಚುಗೆಯ ಮಾತನಾಡಿ, ಆಮೇಲೆ 'ನೀನು ಮುಜುಗರಪಡದೆ ಇರುವುದಾದರೆ ನಾನೂ ಗೋವಿಂದಣ್ಣನ ಥರದ ವ್ಯಕ್ತಿಯೇ ಎಂದು ತಿಳಿದುಕೋ. ನಮ್ಮಲ್ಲಿ ಈ ಸಾರಿ ಒಳ್ಳೆ ಭತ್ತದ ಬೆಳೆ ಆಗಿದೆ. ತೆಂಗಿನಕಾಯಿಯೂ ಸಮೃದ್ಧ ಇದೆ' ಎಂದ. ತುಸು ಹೊತ್ತು ಬಿಟ್ಟು, 'ಬೇಕಾದರೆ ಹೇಳು. ನಾಳೆ ಎರಡನ್ನೂ ನಿನಗೆ ಕಳುಹಿಸಿಕೊಡುತ್ತೇನೆ' ಎನ್ನುವಲ್ಲಿಂದ ಪ್ರಾರಂಭಿಸಿ ಇನ್ನೇನೇನೋ ಆಮಿಷಗಳನ್ನು ಸೌಮ್ಯಳಿಗೆ ಒಡ್ಡಿದ.

ಕುಪ್ಪಣ್ಣ ಭಟ್ಟನ ಯಾವ ಆಮಿಷಕ್ಕೂ ಸೌಮ್ಯ ಒಳಗಾಗಲಿಲ್ಲ. 'ಅಣ್ಣ, ನೀವು ಆಗಾಗ ನಮ್ಮಲ್ಲಿಗೆ ಬರುವುದು ಯಾಕೋ ನನಗೆ ಇಷ್ಟ ಇಲ್ಲ. ನನ್ನ ಗಂಡ ಎಲ್ಲಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ಅವರು ಮನೆಯಲ್ಲಿರುತ್ತಿದ್ದರೆ ನಾನು ನಿಮ್ಮನ್ನು ಬರಬೇಡಿ ಎನ್ನುತ್ತಿದ್ದಿಲ್ಲ. ದಯವಿಟ್ಟು ನೀವು ಹೀಗೆ ಬರಬಾರದು' ಎಂದು ಕೈಮುಗಿದಳು.

ಕುಪ್ಪಣ್ಣ ಭಟ್ಟನಿಗೆ ಕೋಪ ಬಂದರೂ, ಅದನ್ನು ತೋರ್ಪಡಿಸದ ಆತ 'ಅರೇ, ಇದೆಂಥ ಮಾತು ನಿನ್ನದು? ನಾನು ಯಾವ ಕೆಟ್ಟ ಉದ್ದೇಶದಲ್ಲೂ ಇಲ್ಲಿಗೆ ಬರುವುದಲ್ಲ ಸೌಮ್ಯ. ಸುಮ್ಮನೇ ಅಂದರೆ ಸುಮ್ಮನೆ ಬರುತ್ತಿದ್ದೇನೆ. ನನಗೆ ಹೆಣ್ಣಿನ ಹುಚ್ಚಿದೆ ಅಂದುಕೊಂಡಿಯಾ? ಹಾಗಿದ್ದರೆ ಆ ಇಂದ್ರಾಣಿಯಂಥ ರಂಭೆ ನನಗೆ ಸೆರಗು ಹಾಸಲು ಸದಾ ಸಿದ್ಧಳಿದ್ದಾಳೆ ಗೊತ್ತಾ?' ಎಂದು ಗಂಭೀರವಾಗಿ ಹೇಳಿ, 'ಏನೋ ತಿಳಿಯದೆ ಆಡಿದ್ದಿ ಎಂದು ಕ್ಷಮಿಸಿದ್ದೇನೆ. ಎರಡೇ ಎರಡು ದಿನದಲ್ಲಿ ನಿನ್ನ ಗಂಡ ಎಲ್ಲಿದ್ದರೂ ನೀನಿದ್ದಲ್ಲಿಗೆ ತಂದು ಒಪ್ಪಿಸುವ ಜವಾಬ್ದಾರಿ ನನ್ನದು' ಎಂದ.

ಸೌಮ್ಯ ಕೈಮುಗಿದಳು. 'ಸ್ವಾಮಿ ನನಗೆ ನೀವು ಏನು ಎಂದು ಗೊತ್ತುಂಟು. ನನ್ನ ಗಂಡ ಬರುತ್ತಾರೋ ಬಿಡುತ್ತಾರೋ ಅದು ಅವರಿಗೆ ಬಿಟ್ಟ ವಿಚಾರ. ಆದರೆ ನೀವು ನಿಮ್ಮ ಮಂತ್ರ ತಂತ್ರದ ಮೂಲಕ ನನ್ನ ಗಂಡನಿಗೆ ಹುಚ್ಚು ಹಿಡಿಸಿ ಇಲ್ಲಿಗೆ ಕರೆತರುವುದು ಬೇಡ! ದಮ್ಮಯ್ಯ ನಿಮ್ಮ ಕಾಲಿಗೆ ಬೀಳುತ್ತೇನೆ' ಎಂದು ಅಂಗಲಾಚಿದಳು. ಆಮೇಲೆ ಭಟ್ಟನ ಮೇಲಿನ ಸಿಟ್ಟಿನಲ್ಲಿ ತಮ್ಮಿಬ್ಬರ ಮಾತುಕತೆಯ ಹೊತ್ತಿನಲ್ಲಿ ಮೌನವಾಗಿದ್ದ ತನ್ನ ಅಮ್ಮನ ಕೈ ಹಿಡಿದು, 'ಬನ್ನಿ ಒಳಗೆ' ಎಂದು ಆಕೆಯನ್ನು ಕರೆದೊಯ್ಯುತ್ತಾ ಚಾವಡಿಯ ಬಾಗಿಲನ್ನು ಧಡಕ್ಕನೆ ಎಳೆದುಕೊಂಡು ಪ್ರತಿಭಟಿಸಿದಳು.

ಕುಪ್ಪಣ್ಣ ಭಟ್ಟನಿಗೆ ಸಿಟ್ಟು ಬಂತು. ಆ ಸಿಟ್ಟಿನಲ್ಲಿ ಆತ, 'ಹೇಗೆ ನೀನು ತಪ್ಪಿಸಿಕೊಳ್ಳುತ್ತಿ ನನ್ನ ಕಪಿಮುಷ್ಟಿಯಿಂದ?' ಎಂದು ದೊಡ್ಡದಾಗಿ ಗುಣುಗುಣಿಸುತ್ತಾ ಹೆಜ್ಜೆ ಹಾಕಿದ್ದ.

ಮರುದಿನ ಶಂಕರಿ ಅಮ್ಮ ಊಟ ಮಾಡಿ 'ಸ್ವಾಮಿ ದೇವರೇ' ಎನ್ನುತ್ತಾ ಅಟ್ಟುಂಬಳದಲ್ಲೇ ಉದ್ದಕ್ಕೂ ಕಾಲು ಚಾಚಿ ಅಡ್ಡ ಬೀಳಲು (ಮಲಗಲು) ಮುಂದಾದಾಗ ಅವರ ಬಳಿ ಬಂದ ಸೌಮ್ಯ, ಶಂಕರಿ ಅಮ್ಮನ ಕಾಲ ಬಳಿ ಕುಳಿತುಕೊಂಡು – 'ಅಕ್ಕ, ಒಂದು ವಿಷಯ ಹೇಳಬೇಕೆಂದಿದ್ದೆ. ನೀವು ಹೇಳಿ ಅಂದರೆ ಹೇಳುತ್ತೇನೆ' ಎಂದಳು ಆತಂಕದಲ್ಲಿ.

ಶಂಕರಿ ಅಮ್ಮ 'ಏ ಅದಕ್ಕೇನು ಸೌಮ್ಯ? ಏನದು ಹೇಳು?' ಎಂದು ಕೈ ಊರಿ ಮೇಲೇಳಲು ಪ್ರಯತ್ನಿಸಿದರು. ಸೌಮ್ಯ 'ಬೇಡಕ್ಕ ನೀವು ಮಲಗಿಕೊಳ್ಳಿ ನಾನು ಹೇಳಬೇಕಾದ್ದನ್ನು ಹೇಳುತ್ತೇನೆ' ಎಂದು ಕುಪ್ಪಣ್ಣಭಟ್ಟನು ತನ್ನ ಮನೆಗೆ ಬಂದು ಮಾಡುವ ಕೀಟಲೆಯನ್ನು ಹೇಳಿದಳು.

ಎಲ್ಲವನ್ನೂ ಕೇಳಿಸಿಕೊಂಡ ಶಂಕರಿ ಅಮ್ಮ 'ಅಯ್ಯೋ! ದೇವರೇ! ಅಷ್ಟು ಮುಂದುವರಿದನೇ ಆ ಕುಪ್ಪಣ್ಣ? ನಾನು ಯಜಮಾನರಿಗೆ ಹೇಳುತ್ತೇನೆ. ನೀನು ಗಾಬರಿಯಾಗಬೇಡ' ಎಂದು ಸಂತೈಸಿದರು.

(ಸಶೇಷ)